ಫ್ರೀಡಂ ನ್ಯೂಸ್

# ವಿಧಾನಸೌಧಕ್ಕೆ ರಾಜಗಾಂಭೀರ್ಯ:

### ಕೋಟಿ ಕೋಟಿ ವೆಚ್ಚದಲ್ಲಿ ರೋಸ್‌ವುಡ್ ಬಾಗಿಲು!



**ಬೆಂಗಳೂರು:** ಶಕ್ತಿ ಸೌಧ ವಿಧಾನಸೌಧ ಇನ್ಮುಂದೆ ಕೇವಲ ಅಧಿಕಾರ ಕೇಂದ್ರವಲ್ಲ, ಅದು ಜಾಗತಿಕ ಮಟ್ಟದ ಪ್ರವಾಸಿ ಆಕರ್ಷಣೆಯ ಕೇಂದ್ರವಾಗಲಿದೆ! ವಿಧಾನಸೌಧದ ಸೌಂದರ್ಯವನ್ನು ಇಮ್ಮಡಿಗೊಳಿಸಲು ಸ್ಪೀಕರ್ ಯು.ಟಿ. ಖಾದರ್ ಅವರು ಈಗ ಮಾಸ್ಟರ್ ಪ್ಲಾನ್ ಸಿದ್ಧಪಡಿಸಿದ್ದು, ಅದರ ಮೊದಲ ಹೆಜ್ಜೆಯಾಗಿ ವಿಧಾನಸಭೆಯ ಪ್ರವೇಶ ದ್ವಾರಕ್ಕೆ ಅಳವಡಿಸಲಾದ ಭವ್ಯ ರೋಸ್‌ವುಡ್ ಬಾಗಿಲು ಎಲ್ಲರ ಗಮನ ಸೆಳೆಯುತ್ತಿದೆ. ಪಶ್ಚಿಮ ಬಾಗಿಲು ಸೇರಿದಂತೆ ಉತ್ತರ ಮತ್ತು ದಕ್ಷಿಣದ ಎಲ್ಲಾ ದ್ವಾರಗಳಿಗೂ ಇದೀಗ ಅತ್ಯಂತ ಆಕರ್ಷಕ ಕಲಾತ್ಮಕ ಬಾಗಿಲುಗಳನ್ನು ಅಳವಡಿಸಲು ಆದೇಶ ನೀಡಲಾಗಿದೆ.

**ಒಂದೊಂದು ಬಾಗಿಲಿಗೆ 70-80 ಲಕ್ಷ ರೂಪಾಯಿ ಖರ್ಚು!**

ಒಂದೊಂದು ರೋಸ್‌ವುಡ್ ಬಾಗಿಲು ನಿರ್ಮಾಣಕ್ಕೆ ಅಂದಾಜು 70 ರಿಂದ 80 ಲಕ್ಷ ರೂಪಾಯಿ ಖರ್ಚಾಗುತ್ತಿದೆ. PWD ಮತ್ತು ಕರ್ನಾಟಕ ಸ್ಟೇಟ್ ಫಾರೆಸ್ಟ್ ಡೆವಲಪ್ಮೆಂಟ್ ಕಾರ್ಪೊರೇಷನ್ ಸಹಯೋಗದಲ್ಲಿ ಈ ಕಾಮಗಾರಿ ನಡೆಯುತ್ತಿದೆ. ಬೆಂಗಳೂರಿಗೆ ಬರುವ ಪ್ರವಾಸಿಗರು ವಿಧಾನಸೌಧದ ಮುಂದೆ ಫೋಟೋ ತೆಗೆಸಿಕೊಳ್ಳುವುದು ಸಾಮಾನ್ಯ, ಹಾಗಾಗಿ ಈ ಸೌಂದರ್ಯೀಕರಣಕ್ಕೆ ಒತ್ತು ನೀಡಲಾಗಿದೆ.

**ವಿಶ್ವವೇ ಮಾತಾಡಬೇಕು:** ಯು.ಟಿ. ಖಾದರ್ ಸಂಕಲ್ಪ!

ಈ ಬಗ್ಗೆ ವಿಧಾನಸೌಧದಲ್ಲಿ ಮಾಹಿತಿ ನೀಡಿದ ಸ್ಪೀಕರ್ ಯು.ಟಿ. ಖಾದರ್ ಅವರು, ವಿಧಾನಸೌಧವು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಮಾತ್ರ ಸೀಮಿತವಾಗಬಾರದು, ಇದು ಜನಸಾಮಾನ್ಯರ ಕೇಂದ್ರವಾಗಬೇಕು ಎಂದಿದ್ದಾರೆ.

# ಲೋಕಾಯುಕ್ತ ಕಚೇರಿಗೆ ಗಂಧದ ಕಡ್ಡಿ ಪಾರ್ಸಲ್!

## ಕಡತಕ್ಕೆ 'ಪೂಜೆ' ಮಾಡಿ ಎಂದ ಹೋರಾಟಗಾರ!



**ಕೆ.ಆರ್.ಪೇಟೆ:** ಲೋಕಾಯುಕ್ತ ಕಚೇರಿಯ ಆಮೆಗತಿಯ ಕೆಲಸಕ್ಕೆ ಬೇಸತ್ತ ಸಾಮಾಜಿಕ ಹೋರಾಟಗಾರರೊಬ್ಬರು ಈಗ ಗಂಧದ ಕಡ್ಡಿ ಕಳುಹಿಸುವ ಮೂಲಕ ವಿನೂತನವಾಗಿ ಆಕ್ರೋಶ ಹೊರಹಾಕಿದ್ದಾರೆ! ಖಾಸಿಂಖಾನ್ ಸಮುದಾಯ ಭವನ ನಿರ್ಮಾಣದಲ್ಲಿ ನಡೆದಿದೆ ಎನ್ನಲಾದ 50 ಲಕ್ಷ ರೂಪಾಯಿಗಳ ಅಕ್ರಮದ ತನಿಖೆ ನಡೆಸದ ಅಧಿಕಾರಿಗಳಿಗೆ ಸಮಾಜ ಸೇವಕ ಎಚ್.ಬಿ. ಮಂಜುನಾಥ್ ಈಗ 'ಪೂಜೆ' ಮಾಡುವಂತೆ ಟಾಂಗ್ ನೀಡಿದ್ದಾರೆ. ಸಾರ್ವಜನಿಕರ ಹಣ ಲೂಟಿಯಾಗುತ್ತಿದ್ದರೂ ಕಣ್ಣು ಮುಚ್ಚಿ ಕುಳಿತಿರುವ ವ್ಯವಸ್ಥೆಗೆ ಇದು ಅಕ್ಷರಶಃ ಚಾಟಿ ಬೀಸಿದಂತಿದೆ!

**ವರ್ಷಗಟ್ಟಲೆ ಕಡತ ಧೂಳು ಹಿಡಿದಿದ್ದಕ್ಕೆ ಮಂಜುನಾಥ್ ಗರಂ!**

ಸಮುದಾಯ ಭವನದ ಹೆಸರಲ್ಲಿ ನಡೆಯದ ಕಾಮಗಾರಿಗೆ ಹಣ ಬಿಡುಗಡೆಯಾಗಿದೆ ಎಂದು ಮಂಜುನಾಥ್ ದಾಖಲೆ ಸಮೇತ ದೂರು ನೀಡಿದ್ದರು. ಆದರೆ, ಸ್ಥಳಕ್ಕೆ ಬಂದಿದ್ದ ಲೋಕಾಯುಕ್ತ ಇಂಜಿನಿಯರ್ ನೈಜ ವರದಿ ನೀಡುವ ಬದಲಿಗೆ ಹಳೆ ಕಟ್ಟಡಕ್ಕೆ 'ದುರಸ್ತಿ' ಬಣ್ಣ ಬಳಿದು ವರದಿ ನೀಡಿದ್ದರು ಎನ್ನಲಾಗಿದೆ. ಈ ಬಗ್ಗೆ ಮರು ತನಿಖೆಗೆ ಕೋರಿ 2024ರಲ್ಲೇ ಅರ್ಜಿ ಸಲ್ಲಿಸಿದ್ದರೂ, ಲೋಕಾಯುಕ್ತ ಕಚೇರಿಯಿಂದ ಬಂದ ಉತ್ತರ ಮಾತ್ರ ಆಘಾತಕಾರಿಯಾಗಿತ್ತು. "ನಿಮ್ಮ ಅರ್ಜಿಯ ಮೇಲೆ ಯಾವುದೇ ಕ್ರಮ ವಹಿಸದೆ ವರ್ಷಗಟ್ಟಲೆ ಕಡತದಲ್ಲೇ ಇಡಲಾಗಿದೆ" ಎಂಬ ಬೇಜವಾಬ್ದಾರಿ ಉತ್ತರವನ್ನೇ ಲೋಕಾಯುಕ್ತ ಇಲಾಖೆ ನೀಡಿತ್ತು!

**ಹೋರಾಟಗಾರರ ಆಕ್ರೋಶ: ಕೆಲಸಕ್ಕಾಗದ ಕಡತಕ್ಕೆ ಪೂಜೆಯೇ ಗತಿ!**

ಸಾವಿರಾರು ರೂಪಾಯಿ ಖರ್ಚು ಮಾಡಿ, ಪ್ರಾಣದ ಹಂಗು ತೊರೆದು ಭ್ರಷ್ಟರ ವಿರುದ್ಧ ದೂರು ನೀಡಿದರೆ, ಅಧಿಕಾರಿಗಳು ಅದನ್ನು ಕಸದ ಬುಟ್ಟಿಗೆ ಹಾಕುತ್ತಿರುವುದು ಮಂಜುನಾಥ್ ಅವರ ಕೆಂಗಣ್ಣಿಗೆ ಗುರಿಯಾಗಿದೆ. "ನಿಮಗೆ ಕೆಲಸ ಮಾಡಲು ಆಗದಿದ್ದರೆ ಕನಿಷ್ಠ ಪಕ್ಷ ಆ ಕಡತಗಳಿಗಾದರೂ ಪೂಜೆ ಮಾಡಿ" ಎಂದು ಗಂಧದ ಕಡ್ಡಿಯನ್ನು ಪಾರ್ಸಲ್ ಮಾಡುವ ಮೂಲಕ ಲೋಕಾಯುಕ್ತ ವ್ಯವಸ್ಥೆಯ ನಿರ್ಲಕ್ಷ್ಯವನ್ನು ರಾಜ್ಯದ ಮುಂದೆ ಬಯಲು ಮಾಡಿದ್ದಾರೆ. ಭ್ರಷ್ಟಾಚಾರ ತಡೆಗಟ್ಟಬೇಕಾದ ಸಂಸ್ಥೆಯೇ ಹೀಗೆ ಮೌನಕ್ಕೆ ಶರಣಾದರೆ ಸಾಮಾನ್ಯ ಜನರಿಗೆ ನ್ಯಾಯ ಎಲ್ಲಿ ಸಿಗಬೇಕು ಎಂಬ ಪ್ರಶ್ನೆ ಈಗ ಕೆ.ಆರ್.ಪೇಟೆಯಲ್ಲಿ ಜೋರಾಗಿ ಕೇಳಿಬರುತ್ತಿದೆ!



ಎಲ್. ಎಂ. ನಾಗರಾಜು
ಪ್ರಧಾನ ಸಂಪಾದಕರು

ಸಂಪಾದಕೀಯ

# ಸಿಎಂ ಸಿದ್ದು ವಾಡಿಕೆ ಬಜೆಟ್ ಪಾರ್ಟಿ; ಸೋಶಿಯಲ್ ಮೀಡಿಯಾದಲ್ಲಿ ವಾಂತಿ ಭೇದಿ!

ಸಿಎಂ ಸಿದ್ದು ವಾಡಿಕೆಯಂತೆ ಕೊಟ್ಟ ಬಜೆಟ್ ಪಾರ್ಟಿಯು ಸೋಶಿಯಲ್ ಮೀಡಿಯಾದಲ್ಲಿ ವಾಂತಿ ಭೇದಿಗೆ ಕಾರಣವಾಗಿದೆ. ಅದ್ಯಾರೋ ಪುಣ್ಯಾತ್ಮ ತನ್ನ ಹೊಟ್ಟೆಪಾಡಿಗಾಗಿ ಸಿಎಂ ಜತೆಗಿನ ಫೋಟೋ ಫೇಸ್ಬುಕ್ ಗೆ ಹಾಕಿದ್ದು, ಅದರಲ್ಲಿ ರಾಯಲ್ ಸಲ್ಯೂಟ್ -21 ಕಂಡಿದ್ದು ಕಾಳಗದ ಕೇಂದ್ರಬಿಂದು. ಸಿಎಂ ಅಕ್ಕಪಕ್ಕದಲ್ಲಿದ್ದವರ ಜಾತಿಯು ಸಂತ್ರಸ್ತರ ದಳ್ಳುರಿಗೆ ಎಳ್ಳು ಎರಚಿದೆ.
ಸಿದ್ದು ರಾಯಲ್ ಸಲ್ಯೂಟ್ ವಿವಾದದ ಬಗ್ಗೆ ನಮ್ಮ ವರದಿಗಾರನಿಗೆ ಕೇಳಲಾಗಿ ಅವರ ವರದಿ ಇಲ್ಲಿದೆ.

ಏಳು ಗಂಟೆಗೆ ಪಾರ್ಟಿ ಇತ್ತು. ಕೆಲವರಿಗೆ ಕರೆ ಮಾಡಿ ಆಹ್ವಾನ ಕೊಡಲಾಗಿತ್ತು. ಎಲ್ಲ ಕ್ಯಾಟಗರಿಯ ಮುನ್ನೂರಕ್ಕೂ ಹೆಚ್ಚು ಪತ್ರಕರ್ತರಿರುವ ಸಿಎಂ ಗ್ರೂಪ್ ಗೆ ಇನ್ವಿಟೇಷನ್ ಹಾಕಲಾಗಿತ್ತು. ಹೀಗೆ ಏಳು ಗಂಟೆಗೆಲ್ಲ ಹಾಲ್ ತುಂಬಿತ್ತು. ವೃತ್ತಿನಿರತರು,ನಿವೃತ್ತರು, ಫ್ರೀಲ್ಯಾನ್ಸರ್ ಗಳು, ಯೂಟ್ಯೂಬರ್ ಗಳು, ಟ್ರೈನಿಗಳು ಗಿಜಿಗುಡುತ್ತಿದ್ದರು ಸೀಟಿಲ್ಲದೆ ಹಲವರು. ನಿಂತಿದ್ದರು. ಏಳಕ್ಕೆ ಬಂದವರು ಕಾದಿದ್ದೇ ಕಾದಿದ್ದು ಬಾಟೆಲ್ ಸೌಂಡ್ ಇಲ್ಲ. ಊಟನೂ ಕೊಡ್ತಿಲ್ಲ. ಅತ್ತ ಒಳಮಿಸಲು ಕ್ಯಾಬಿನೆಟ್ ನಲ್ಲಿ ಬ್ಯುಸಿಯಿದ್ದ ಸಿಎಂ ಬರ್ತಾ ಇಲ್ಲ ಇಲ್ಲಿ ಊಟ ಚಾಲೂ ಆಕ್ತಿಲ್ಲ. ಕಡೆಗೂ ಸಿಎಂ ಇಬ್ಬರು ಮಂತ್ರಿಗಳೊಟ್ಟಿಗೆ ಬಂದ್ರು. ಅತ್ತ ಊಟಕ್ಕೆ ಒಮ್ಮೆಗೆ ಎಲ್ಲರೂ ನುಗ್ಗಿದ್ರು.

ಇದು ಭಾಷಣದ ವೇದಿಕೆ ಅಲ್ಲ ಎಂದು ಗೊತ್ತಿಲ್ಲದ ಸಿಡಿಗಾಲು ಮಂತ್ರಿ ಒಬ್ಬರು ಸಿಎಂ ಸಲಹೆಗಾರರನ್ನು ಬಾರೊ ಇಲ್ಲಿ ಮೈಕ್ ಎಲ್ಲಿ..? ಅದೆಲ್ಲಿ ಇದೆಲ್ಲಿ ಅಂತಿದ್ರು, ನಿವೃತ್ತರೊಬ್ಬರು ವೆಜ್ ಕೇಳಿದರೇ ಇಲ್ಲ ಇಲ್ಲ ಅಲ್ಲೇ ಹೋಗಿ ಹಾಕಿಸಿಕೊಂಡು ತಿನ್ನಿ ಎಂದು ಸಿಡಿಗಾಲು ಮಂತ್ರಿಯ ಉದ್ಧಟತನ ತೋರಿದ್ರು.

ಇತ್ತ ಟಪಾಂಗುಚ್ಚಿ ಸ್ಟೆಪ್ಸ್ ಗೆ ಹೆಸರಾದ ಮತ್ತೊಬ್ಬ ಮಂತ್ರಿ ನಂಗೂ ಇದಕ್ಕೂ ಸಂಬಂಧ ಇಲ್ಲ ಎಂದು ಸುಮ್ಮನೆ ಕೂತುಬಿಟ್ಟರು.
ಅತ್ತ ಸೂಕ್ತ ವ್ಯವಸ್ಥೆ ಇಲ್ಲದೆ ಅತ್ತ ಊಟದ ಪರದಾಟ..ಇತ್ತ ಸಿಎಂ ಸುತ್ತ ಸುತ್ತುವರಿಯಲು ಕೆಲ ಅಪ್ಲಿಕೇಶನ್ ವೀರರ ಹೋರಾಟ..ಇವೆರಡೂ ತಡೆಯಲು ಸಿಎಂ ಮೀಡಿಯಾ ಸಲಹೆಗಾರ ಮತ್ತು ವಾರ್ತಾ ಇಲಾಖೆ ಆಯುಕ್ತರೇ ಹೈರಾಣಾದರು.

ಇದೆ ವೇಳೆ ಟಿವಿಗಳ ಸಂಪಾದಕರ ಎಂಟ್ರಿ ಆಯಿತು. ಅವರಿಗೆ ಕೂರಲು ಕುರ್ಚಿಯಿಲ್ಲ. ಇತ್ತ ಮೊದಲೇ ಕೂತವರು ರಾಯಲ್ ಆಗಿ ಏರಿಸುತ್ತಿದ್ದರೇ, ಅತ್ತ ಕೆಲಸ ಮುಗಿಸಿ ತಡವಾಗಿ ಬಂದ ವೃತ್ತಿನಿರತರು ಕೆಲ ನಿಮಿಷ ಕೆಕಮಕ ನಿಲ್ಲಬೇಕಾಯಿತು. ಸಿಎಂ ಸುತ್ತಣ ವೃತ್ತಿ ವಿಶ್ರಾಂತರು ಆರಾಮಕ್ಕೆ ಕೂತು ಕುಡಿಯುತ್ತಿದ್ದರೆ ವೃತ್ತಿನಿರತರು ಸೀಟು ಇಲ್ಲದೆ ಬಂದ ತಪ್ಪಿಗೆ ಕೆಲಕಾಲ ಮುಜುಗರಕ್ಕೂ ಒಳಗಾಗಬೇಕಾಯಿತು. ಇದೆಲ್ಲ ಕಂಡ ನಮ್ಮ ಪ್ರತಿನಿಧಿ ಥರ್ಟಿ ಗೆ ಕಿಕ್ಕೇರಿಸಿಕೊಂಡು ಊಟಕ್ಕೆ ಮನೆಗೆ ಹೋದರಂತೆ.

ಇಂತಿಪ್ಪ ಸಿಎಂ ಪಾರ್ಟಿಗೆ ಹೋದವರನ್ನು ಜನ ಬೈತಿದ್ದಾರೆ. "ಉಡುರಾಜನೋಲಗದಿ ಕೂತು ಮೈಮರೆತಿರೇಕೆಂದು ಜಗ್ಗುತ್ತಿದ್ದಾರೆ. ಅವರೇಕೆ ಬರಬೇಕಿತ್ತು..? ಇವರನ್ನೇಕೆ ಕರೆಯಬೇಕಿತ್ತು..? ಎನ್ನುತ್ತಿದ್ದಾರೆ. ಮುನ್ನೂರು ಜನಕ್ಕೆ ಸರಿಯಾಗಿ ವ್ಯವಸ್ಥೆ ಮಾಡದೆ, ಊಟಕ್ಕೆ ಕಾಯಿಸಿ ಸಿಎಂ ಕಚೇರಿ ಸೋತಿತು. ಅಧಿಕಾರಶಾಹಿ ಜತೆ ಒಂದು ಪೆಗ್ಗು ಹಾಕಿದರೆ ಪತ್ರಕರ್ತ ತನ್ನ ವೃತ್ತಿ ಮರೆಯುತ್ತಾನೆ ಎನ್ನುವ ಕಗ್ಗ ಹೊಸೆದು ಟೀಕಾಕಾರರು ಸೋಲುತ್ತಿದ್ದಾರೆ.

# ಇಸ್ರೇಲ್-ಇರಾನ್ ವಾರ್;
# ದನ ಕಾಯ್ತಿದೆಯಾ ವಿಶ್ವಸಂಸ್ಥೆ..?



**ವಿಶ್ವಸಂಸ್ಥೆ ಎತ್ತ ಸಾಗುತ್ತಿದೆ?:** ಇಸ್ರೇಲ್, ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ಸದ್ಯಕ್ಕೆ ನಿಲ್ಲುವ ಲಕ್ಷಣಗಳು ಕಾಣಿಸುತ್ತಿಲ್ಲ. ಭೀಕರ ಯುದ್ಧದಿಂದಾಗಿ ಅಪಾರ ಸಾವುನೋವುಗಳು ಸಂಭವಿಸುತ್ತಿದ್ದು, ಆಸ್ತಿಪಾಸ್ತಿ ನಷ್ಟ ಉಂಟಾಗುತ್ತಿದೆ. ಮಧ್ಯಪ್ರಾಚ್ಯದ ಈ ಉದ್ವಿಗ್ನತೆಯು ಜಾಗತಿಕ ಮಾರುಕಟ್ಟೆಯಲ್ಲಿ ತೀವ್ರ ಏರಿಳಿತಕ್ಕೆ ಕಾರಣವಾಗಿದ್ದು, ಪ್ರಮುಖವಾಗಿ ತೈಲಬೆಲೆ ಏರಿಕೆಯ ಭೀತಿಯನ್ನು ಮೂಡಿಸಿದೆ.

**ಜಾಗತಿಕ ರಕ್ಷಕನ ನಿಷ್ಕ್ರಿಯತೆ:** ಜಗತ್ತಿನಾದ್ಯಂತ ಇಷ್ಟೆಲ್ಲಾ ತಳಮಳಗಳು ನಡೆಯುತ್ತಿದ್ದರೂ ವಿಶ್ವಸಂಸ್ಥೆ ಏನು ಮಾಡುತ್ತಿದೆ ಎನ್ನುವುದೇ ಈಗಿರುವ ದೊಡ್ಡ ಪ್ರಶ್ನೆ. ಶಾಂತಿ ಸ್ಥಾಪನೆ ಮತ್ತು ಸಂಘರ್ಷ ತಗ್ಗಿಸುವಿಕೆಯಲ್ಲಿ ವಿಶ್ವಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ನಾವು ಪಠ್ಯದಲ್ಲಿ ಓದಿದ್ದೆವು. ಆದರೆ ಇಷ್ಟೊಂದು ಜಾಗತಿಕ ಮಟ್ಟದ ಏರುಪೇರುಗಳ ನಡುವೆಯೂ ವಿಶ್ವಸಂಸ್ಥೆ ಮೌನಕ್ಕೆ ಶರಣಾಗಿರುವುದು ನಿಜಕ್ಕೂ ವಿಪರ್ಯಾಸ.

**ಮನುಕುಲಕ್ಕೆ ಎಚ್ಚರಿಕೆ:** ಸುಂದರ ನಾಳೆಗಳ ಉಳಿವಿಗಾಗಿ ಇಡೀ ಮನುಕುಲ ಈಗ ಒಂದಾಗಬೇಕಾದ ಅನಿವಾರ್ಯತೆ ಇದೆ. ಇಲ್ಲದಿದ್ದರೆ, "ನಾವು ಯುದ್ಧವನ್ನು ಕೊನೆಗಾಣಿಸಬೇಕು, ಇಲ್ಲವಾದರೆ ಯುದ್ಧವೇ ನಮ್ಮನ್ನು ಕೊನೆಗಾಣಿಸುತ್ತದೆ" ಎನ್ನುವ ಜಾನ್ ಎಫ್. ಕೆನಡಿಯವರ ಎಚ್ಚರಿಕೆಯ ಮಾತುಗಳು ನಿಜವಾಗುವ ಕಾಲ ದೂರವಿಲ್ಲ.

---



**ಕಬ್ಬಿಣವನ್ನು ಯಾರು ನಾಶ ಮಾಡಲು ಸಾಧ್ಯವಿಲ್ಲ ,
ಆದರೆ ಅದರೊಳಗಿನ ತುಕ್ಕು
ಅದನ್ನು ನಾಶ ಮಾಡಬಲ್ಲದು.
ಹಾಗೆಯೇ.. ಒಬ್ಬ ವ್ಯಕ್ತಿಯನ್ನು
ಬೇರೊಬ್ಬರು ನಾಶ ಮಾಡಲಾರರು,
ಆತನ ಮನಸ್ಥಿತಿಯೇ ಆತನನ್ನು
ನಾಶಮಾಡಬಲ್ಲದು.**

**-ರತನ್ ಟಾಟಾ**

# ಗೋಕರ್ಣ: 44 ಅನಧಿಕೃತ ರೆಸಾರ್ಟ್‌ಗಳ ತೆರವಿಗೆ ಮುಹೂರ್ತ ಫಿಕ್ಸ್!



**ಕಾರವಾರ:** ಪ್ರವಾಸಿಗರ ಸ್ವರ್ಗ ಗೋಕರ್ಣದ ಕಡಲತೀರದಲ್ಲಿ ಈಗ ಬುಲ್ಡೋಜರ್ ಸದ್ದು ಕೇಳಿಬರಲಿದೆ! ಕರಾವಳಿ ನಿಯಂತ್ರಣ ವಲಯ (CRZ) ನಿಯಮಗಳನ್ನು ಗಾಳಿಗೆ ತೂರಿ ಅನಧಿಕೃತವಾಗಿ ತಲೆಎತ್ತಿದ್ದ 44 ರೆಸಾರ್ಟ್‌ಗಳನ್ನು ತೆರವುಗೊಳಿಸಲು ಕುಮಟಾ ತಹಶೀಲ್ದಾರ್ ಶ್ರೀಕೃಷ್ಣ ಈಗ ಆದೇಶ ಹೊರಡಿಸಿದ್ದಾರೆ. ಅರಬ್ಬಿ ಸಮುದ್ರದ ಸೌಂದರ್ಯಕ್ಕೆ ಧಕ್ಕೆ ತರುತ್ತಿದ್ದ ದುಬ್ಬನಸಶಿ ಹಾಗೂ ನಡುಮಸ್ಕೇರಿ ಭಾಗದ ರೆಸಾರ್ಟ್‌ಗಳ ವಿರುದ್ಧ ಜಿಲ್ಲಾಡಳಿತ ಈಗ ಯುದ್ಧ ಸಾರಿದೆ.

**ಆಪರೇಷನ್ ಕ್ಲೀನ್: 21 ರೆಸಾರ್ಟ್‌ಗಳು ಸೀಜ್! ತೆರವು ಕಾರ್ಯಾಚರಣೆಯ ಕಂಪ್ಲೀಟ್ ಡಿಟೇಲ್ಸ್ ಇಲ್ಲಿದೆ:**

- ಒಟ್ಟು 44 ರೆಸಾರ್ಟ್‌ಗಳ ವಿರುದ್ಧ ತೆರವು ಆದೇಶ ಜಾರಿಯಾಗಿದೆ.
- ಇದರಲ್ಲಿ 16 ರೆಸಾರ್ಟ್‌ಗಳಿಗೆ ಹೈಕೋರ್ಟ್‌ನಿಂದ ತಡೆಯಾಜ್ಞೆ ಸಿಕ್ಕಿರುವುದರಿಂದ ಸದ್ಯಕ್ಕೆ ಅವು ಸೇಫ್ ಆಗಿವೆ.
- ಉಳಿದವುಗಳ ಪೈಕಿ 7 ರೆಸಾರ್ಟ್ ಮಾಲೀಕರು ತಾವಾಗಿಯೇ ತೆರವು ಮಾಡಲು ಮುಂದಾಗಿದ್ದಾರೆ.
- ಇನ್ನುಳಿದ 21 ರೆಸಾರ್ಟ್‌ಗಳನ್ನು ಕಂದಾಯ ಇಲಾಖೆ ಅಧಿಕಾರಿಗಳು ಸೀಜ್ ಮಾಡಿ, ನೆಲಸಮ ಮಾಡಲಿದ್ದಾರೆ.
-

**ನಿಷೇಧಾಜ್ಞೆ ಜಾರಿ:**
ಪ್ರತಿಭಟನೆಯ ನಡುವೆಯೂ ಕಾರ್ಯಾಚರಣೆ! ರೆಸಾರ್ಟ್ ತೆರವಿಗೆ ಸ್ಥಳೀಯ ಮಾಲೀಕರು ಮತ್ತು ಕಾರ್ಮಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಶಾಸಕ ದಿನಕರ ಶೆಟ್ಟಿ ಅವರು ಪ್ರತಿಭಟನಾಕಾರರ ಬೆಂಬಲಕ್ಕೆ ನಿಂತಿದ್ದಾರೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕಾ ಕ್ರಮವಾಗಿ ದುಬ್ಬನಸಶಿ, ಗಂಗೆಕೊಳ್ಳ ಹಾಗೂ ಭಾವಿಕೊಡ್ಲ ಗ್ರಾಮಗಳಲ್ಲಿ BNS 163ರ ಅನ್ವಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಮಾರ್ಚ್ 10ರ ಬೆಳಗ್ಗೆಯವರೆಗೆ ಈ ಭಾಗದಲ್ಲಿ ಐದಕ್ಕಿಂತ ಹೆಚ್ಚು ಜನ ಸೇರುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

# ಸಿಎಂ ತರಬೇತಿ ಶಿಬಿರಕ್ಕೆ ಪ್ರತಿಪಕ್ಷಗಳ ಬಹಿಷ್ಕಾರ! ಅಶೋಕ ಹೋಟೆಲ್‌ನಲ್ಲಿ ಬಿಜೆಪಿ-ಜೆಡಿಎಸ್ ಗೈರು!



**ಬೆಂಗಳೂರು:** ಇಂದು ಸಂಜೆ ನಗರದ ಹೋಟೆಲ್ ಅಶೋಕದಲ್ಲಿ ಶಾಸಕರಿಗಾಗಿ ಹಮ್ಮಿಕೊಳ್ಳಲಾಗಿರುವ ಮಹತ್ವದ ತರಬೇತಿ ಶಿಬಿರಕ್ಕೆ ಪ್ರತಿಪಕ್ಷಗಳು ಶಾಕ್ ನೀಡಿವೆ! ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖುದ್ದಾಗಿ ತರಬೇತಿ ನೀಡಲಿರುವ ಈ ಕಾರ್ಯಕ್ರಮದಿಂದ ದೂರ ಉಳಿಯಲು ಬಿಜೆಪಿ ಮತ್ತು ಜೆಡಿಎಸ್ ಶಾಸಕರು ನಿರ್ಧರಿಸಿದ್ದಾರೆ. ಆಯವ್ಯಯದ ರಾಜಸ್ವಗಳ ಸಂಗ್ರಹ, ಅನುದಾನದ ವರ್ಗೀಕರಣ ಹಾಗೂ ಬಳಕೆ ಕುರಿತು ನಡೆಯಲಿರುವ ಈ ಶಿಬಿರಕ್ಕೆ ವಿಪಕ್ಷಗಳು ಗೈರಾಗುವ ಮೂಲಕ ಸರ್ಕಾರದ ವಿರುದ್ಧ ತಮ್ಮ ಅಸಮಾಧಾನ ಪ್ರಕಟಿಸಿವೆ.

ಪ್ರತ್ಯೇಕ ಶಿಬಿರಕ್ಕೆ ವಿಪಕ್ಷಗಳ ಸಜ್ಜು! ತರಬೇತಿ ಶಿಬಿರದ ಹೈಲೈಟ್ಸ್ ಇಲ್ಲಿದೆ:

- ವಿಧಾನಸಭೆಯ ಎಲ್ಲಾ ಶಾಸಕರಿಗೆ ಆಯವ್ಯಯದ ನಿರ್ವಹಣೆ ಕುರಿತು ತರಬೇತಿ ನೀಡಲು ಸರ್ಕಾರ ಮುಂದಾಗಿತ್ತು.
- ಆದರೆ ಸಿಎಂ ಸಿದ್ದರಾಮಯ್ಯ ಅವರ ಭಾಷಣವಿರುವ ಈ ಶಿಬಿರಕ್ಕೆ ಪ್ರತಿಪಕ್ಷಗಳು ಬಹಿಷ್ಕಾರ ಹಾಕಿವೆ.
- ಇದೇ ವಿಷಯದ ಕುರಿತು ಪ್ರತ್ಯೇಕವಾಗಿ ತರಬೇತಿ ಶಿಬಿರ ನಡೆಸಲು ಬಿಜೆಪಿ ಹಾಗೂ ಜೆಡಿಎಸ್ ನಿರ್ಧರಿಸಿವೆ.
- ಅನುದಾನ ಬಳಕೆ ಮತ್ತು ನಿರ್ವಹಣೆಯ ಬಗ್ಗೆ ಸರ್ಕಾರ ನೀಡುವ ಮಾಹಿತಿಗಿಂತ ಭಿನ್ನವಾಗಿ ತನ್ನ ಶಾಸಕರಿಗೆ ಮಾಹಿತಿ ನೀಡಲು ವಿಪಕ್ಷಗಳು ಸಜ್ಜಾಗಿವೆ.

# ಶಾಲೆಗಳ ಆಸ್ತಿ ರಕ್ಷಣೆಗೆ ಸರ್ಕಾರಿ ಕಸರತ್ತು: 13,000 ಶಾಲೆಗಳಿಗೆ ಕಾನೂನು ಬೇಲಿ!



**ಬೆಂಗಳೂರು:** ರಾಜ್ಯದ ಸರ್ಕಾರಿ ಶಾಲೆಗಳ ಆಸ್ತಿಯನ್ನು ಭೂಮಾಫಿಯಾದಿಂದ ಉಳಿಸಲು ಶಿಕ್ಷಣ ಇಲಾಖೆ ಈಗ ಮಹತ್ವದ ಹೆಜ್ಜೆ ಇರಿಸಿದೆ. ರಾಜ್ಯಾದ್ಯಂತ ಸುಮಾರು 13,000 ಶಾಲೆಗಳ ಆಸ್ತಿಗಳಿಗೆ ಪಹಣಿ (RTC) ಇಲ್ಲದಿರುವುದು ಪತ್ತೆಯಾಗಿದ್ದು, ಇವುಗಳ ರಕ್ಷಣೆಗೆ ಸರ್ಕಾರ 'ಕಾನೂನು ಬೇಲಿ' ನಿರ್ಮಿಸಲು ಮುಂದಾಗಿದೆ.

- ಆಸ್ತಿ ಸಂರಕ್ಷಣೆಗೆ ಹೊಸ ವಿಧೇಯಕ: ಶಾಲಾ ಆಸ್ತಿಗಳ ಒತ್ತುವರಿ ತಡೆಯಲು ಮಂಡಳಿಯೊಂದನ್ನು ಸ್ಥಾಪಿಸಲು ಸರ್ಕಾರ ಸಿದ್ಧತೆ ನಡೆಸುತ್ತಿದೆ.
- ಖಾತೆ ಇಲ್ಲದ ಶಾಲೆಗಳ ಪಟ್ಟಿ: ಚಿತ್ರದಲ್ಲಿರುವ ಅಂಕಿ-ಅಂಶಗಳ ಪ್ರಕಾರ, ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಹೆಚ್ಚು, ಅಂದರೆ 1214 ಶಾಲೆಗಳಿಗೆ ಆಸ್ತಿ ದಾಖಲೆಗಳಿಲ್ಲ. ಬೆಳಗಾವಿಯಲ್ಲಿ 1000 ಹಾಗೂ ಮಂಡ್ಯದಲ್ಲಿ 900 ಶಾಲೆಗಳು ಇದೇ ಪಟ್ಟಿಯಲ್ಲಿವೆ.
- ದಾನ ನೀಡಿದ ಭೂಮಿ ವಾಪಸ್ ಭೀತಿ: ಈ ಹಿಂದೆ ಶಾಲೆಗಳ ನಿರ್ಮಾಣಕ್ಕೆ ಪೂರ್ವಜರು ದಾನವಾಗಿ ನೀಡಿದ ಭೂಮಿಗೆ ಸರಿಯಾದ ದಾಖಲಾತಿಗಳಿಲ್ಲದ ಕಾರಣ, ಈಗಿನ ವಾರಸುದಾರರು ಭೂಮಿಯನ್ನು ವಾಪಸ್ ಪಡೆಯಲು ಪ್ರಯತ್ನಿಸುತ್ತಿರುವುದು ಸರ್ಕಾರದ ಆತಂಕಕ್ಕೆ ಕಾರಣವಾಗಿದೆ.